**ಸಿ.ಸಿ.ನಂ.1687/2019**

**ಪಿ.ಡಬ್ಲ್ಯೂ:1**

ದಿನಾಂಕಃ23.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎನ್.ಸಿ. ವಕೀಲರಿಂದಃ-</u>**

ನನ್ನ ಸಾಕ್ಷಿ ಪ್ರಮಾಣಪತ್ರದ ಅಂಶಗಳು ನನಗೆ ಗೊತ್ತಿವೆ. ನಾನು ಮೊಬೈಲ್ ಅಂಗಡಿ ವ್ಯವಹಾರ ನಡೆಸುತ್ತಿದ್ದೇನೆ. ನಾನು ಸಖರಾಯಪಟ್ಟಣದಲ್ಲಿ ' ಸುಮನ್ ಕಮ್ಯುನಿಕೇಶನ್' ಎಂಬ ಮೊಬೈಲ್ ಅಂಗಡಿಯನ್ನು ನಡೆಸುತ್ತಿದ್ದೆ. ಸದರಿ ಮೊಬೈಲ್

ಅಂಗಡಿ ನಡೆಸುತ್ತಿದ್ದೆ ಎಂದು ನನ್ನ ದೂರಿನಲ್ಲಿ ಮತ್ತು ಸಾಕ್ಷ್ಯದಲ್ಲಿ ತಿಳಿಸಿಲ್ಲ ಅಂದರೆ ಸರಿ. ಸದರಿ ಮೊಬೈಲ್ ಅಂಗಡಿಯು ಸಖರಾಯಪಟ್ಟಣದ ಕೆ.ಎಂ. ರಸ್ತೆಯಪಕ್ಕದಲ್ಲಿ ಬಾಡಿಗೆ ಮಳಿಗೆಯಲ್ಲಿತ್ತು. ಸದರಿ ಅಂಗಡಿಯನ್ನು 2016 ರಿಂದ 2020 ರವರೆಗು ನಡೆಸಿರುತ್ತೇನೆ, ನಂತರ ಮುಚ್ಚಿರುತ್ತೇನೆ. ಸದರಿ ಅಂಗಡಿಯನ್ನು ನಡೆಸಲು ಮಳಿಗೆಗೆ ಸಂಬಂಧಿದಂತೆ ಬಾಡಿಗೆ ಕರಾರು ಮಾಡಿಸಿಕೊಂಡಿರುವುದಿಲ್ಲ. ಅಲಂಕಾರ್ ಹೋಟೆಲ್ ಅವರಿಗೆ ಸೇರಿದ ಮಳಿಗೆಯಲ್ಲಿ ಅಂಗಡಿ ನಡೆಸುತ್ತಿದ್ದೆ. ಸಖರಾಯಪಟ್ಟಣದ ಕೆ.ಎಂ.ರಸ್ತೆ ಪಕ್ಕದಲ್ಲಿ ಅಲಂಕಾರ್ ಎಂಬ ಹೆಸರಿನ ಹೋಟೆಲ್ ಇಲ್ಲ ಅಂದರೆ ಸರಿಯಲ್ಲ.

ನನ್ನ ಸ್ವಂತ ಊರು ಕಡೂರು ಅಂದರೆ ಸರಿ. ಆರೋಪಿ ನಾನು ಸಖರಾಯಪಟ್ಟಣದಲ್ಲಿ ಮೊಬೈಲ್ ಅಂಗಡಿ ನಡೆಸುತ್ತಿದ್ದಾಗ 3-4 ವರ್ಷಗಳ ಹಿಂದೆ ಅಂಗಡಿಗೆ ಬರುತ್ತಿದ್ದಾಗ ಪರಿಚಯವಾಗಿರುತ್ತಾರೆ. ಆರೋಪಿಯು ನನ್ನ ಮೊಬೈಲ್ ಅಂಗಡಿಯಲ್ಲಿ ಕರೆನ್ಸಿ ಹಾಕಿಸಿಕೊಳ್ಳಲು ಬರುತ್ತಿದ್ದಾಗ ಪರಿಚಯ ಎಂದು ನುಡಿಯುತ್ತಾರೆ. ಆರೋಪಿಯು ತರಕಾರಿ ವ್ಯಾಪಾರ ಮಾಡುತ್ತಿದ್ದರು. ಆರೋಪಿಯು ಚಿಕ್ಕಮಗಳೂರು ತಾಲ್ಲೂಕಿನವರು ಅಂದರೆ ಸರಿ. ಆರೋಪಿಯು ಹೋಲ್ ಸೇಲ್ ತರಕಾರಿ ವ್ಯಾಪಾರ ಮಾಡುತ್ತಿದ್ದರು. ಆರೋಪಿಯು ಅಂಗಡಿಯನ್ನು ತೆರೆದು ಹೋಲ್ ಸೇಲ್ ತರಕಾರಿ ವ್ಯಾಪಾರ ಮಾಡುತ್ತಿದ್ದರಾ? ಅಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಹೋಲ್ ಸೇಲ್ ದರದಲ್ಲಿ ತರಕಾರಿ ಖರೀದಿಸುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ ಅಂದರೆ ಸರಿ. ಆರೋಪಿ ನೇರವಾಗಿ ನನಗೆ ಪರಿಚಯವಾಗಿರುತ್ತಾರೆ. ಆರೋಪಿಗೆ ದಿಃ20.06.2018 ರಂದು ನಾನು ಆರೋಪಿಗೆ ಹಣವನ್ನು ನಗದಾಗಿ ನೀಡಿರುತ್ತೇನೆ. ನೀವು ಮೊಬೈಲ್ ಅಂಗಡಿ ನಡೆಸುತ್ತಿದ್ದು ನಿಮ್ಮ ಬಳಿ ರೂ.2,00,000/- ಇತ್ತಾ? ಅಂದರೆ ಸಾಕ್ಷಿಯು ನಾನು ಮೊಬೈಲ್ ಅಂಗಡಿ ನಡೆಸುತ್ತಿದ್ದು, ನನಗೆ ಅಷ್ಟು ಆದಾಯ ಇತ್ತು ಎಂದು ನುಡಿಯುತ್ತಾರೆ. ನನಗೆ ಮೊಬೈಲ್ ಅಂಗಡಿಯಿಂದ ಮಾಸಿಕವಾಗಿ ರೂ.30,000/- ರಿಂದ ರೂ.50,000/- ಆದಾಯ ಇತ್ತು. ನಾನು ಮೊಬೈಲ್ ಅಂಗಡಿ ನಡೆಸುತ್ತಿದ್ದೆ ಮತ್ತು ತಿಂಗಳಿಗೆ ಇಷ್ಟು ಆದಾಯ ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನೀವು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ? ಅಂದರೆ ಸಾಕ್ಷಿ ನನ್ನ ವಾರ್ಷಿಕ ಆದಾಯ ರೂ.5 ಲಕ್ಷಕ್ಕಿಂತ ಕಡಿಮೆ ಇದ್ದುದರಿಂದ ನಾನು ಆದಾಯ ತೆರಿಗೆ ಪಾವತಿ ಮಾಡಿಲ್ಲ ಎಂದು ನುಡಿಯುತ್ತಾರೆ.

**ಪಿ.ಡಬ್ಲ್ಯು:1**

2018-19 ನೇ ಸಾಲಿನಲ್ಲಿ ಆದಾಯ ತೆರಿಗೆ ಮಿತಿ ರೂ.2,50,000/- ಇದ್ದು, ಈಗ ರೂ.3,00,000/- ಆಗಿದೆ ಅಂದರೆ ನನಗೆ ಗೊತ್ತಿಲ್ಲ. ನೀವು ಯಾವ ಕಂಪನಿಯ ಮೊಬೈಲುಗಳನ್ನು ಮಾರಾಟ ಮಾಡುತ್ತಿದ್ದೀರಿ? ಅಂದರೆ ಸಾಕ್ಷಿಯು 'ಕೆಂಚಂಡ' ಎಂಬ ಚೈನಾ ಕಂಪನಿಯ ಮೊಬೈಲುಗಳನ್ನು ಮಾರುತ್ತಿದ್ದೆ ಮತ್ತು ಹೆಚ್ಚಾಗಿ ಮೊಬೈಲ್ ಸರ್ವಿಸ್ ಮಾಡಿಕೊಡುತ್ತಿದ್ದೆ ಎಂದು ನುಡಿಯುತ್ತಾರೆ.  ಸದರಿ ಕಂಪನಿಯ ಮೊಬೈಲುಗಳು ಇರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಕಂಪನಿಯ ಮೊಬೈಲುಗಳನ್ನು ಬೆಂಗಳೂರಿನಿಂದ ತರಿಸುತ್ತಿದ್ದೆನು. ಆ ಬಗ್ಗೆ ಮೊಬೈಲುಗಳನ್ನು ನಾನು ವ್ಯಾಪಾರಕ್ಕಾಗಿ ಖರೀದಿಸಿರುವುದರ ಬಗ್ಗೆ ಬಿಲ್ಲುಗಳು ಇರುವುದಿಲ್ಲ. ನಾನು ಬೆಂಗಳೂರಿನಿಂದ ಮೊಬೈಲುಗಳನ್ನು ಖರೀದಿಸುತ್ತಿದ್ದ ಅಂಗಡಿಯ ಹೆಸರು ಈಗ ಮರೆತುಹೋಗಿದೆ.

ನಮ್ಮ ಮನೆಯಲ್ಲಿ ನಾವು 5 ಜನ ಸದಸ್ಯರು ಇರುತ್ತೇವೆ. ನಾನು ಈಗ ಎಲೆಕ್ಟ್ರೀಶಿಯನ್ ಕೆಲಸ ಮಾಡುತ್ತಿದ್ದೇನೆ. ಮೊಬೈಲು ಅಂಗಡಿಯನ್ನು ನಿಲ್ಲಿಸಿ ಏಕೆ ಎಲೆಕ್ಟ್ರೀಶಿಯನ್ ಕೆಲಸ ಮಾಡುತ್ತಿದ್ದೀರಿ? ಅಂದರೆ ಸಾಕ್ಷಿಯು ನಷ್ಟವಾಗಿಲ್ಲ, ಕಟ್ಟಡಗಳನ್ನು ಗುತ್ತಿಗೆ ಪಡೆದು ಎಲೆಕ್ಟ್ರೀಶಿಯನ್ ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಎಲೆಕ್ಟ್ರೀಶಿಯನ್ ಕೆಲಸ ಮಾಡುತ್ತಿದ್ದ ಬಗ್ಗೆ ತಿಳಿಸಿಲ್ಲ ಅಂದರೆ ಸಾಕ್ಷಿಯು ಆಗ ನಾನು ಮೊಬೈಲ್ ಅಂಗಡಿಯ ಕೆಲಸ ಮಾಡುತ್ತಿದ್ದೆ, ಈಗ ನಾನು ಎಲೆಕ್ಟ್ರೀಶಿಯನ್ ಕೆಲಸ ಮಾಡುತ್ತಿದ್ದೇನೆ ಹಾಗಾಗಿ ಆ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ನಾನು ಒಬ್ಬನೇ ದುಡಿಯುವ ವ್ಯಕ್ತಿ ಅಂದರೆ ಸರಿ. ನಾನು ಸ್ವಂತ ಮನೆಯನ್ನು ಹೊಂದಿರುತ್ತೇನೆ. ಸದರಿ ಮನೆಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಅದರ ಅಸೆಸ್ಮೆಂಟ್ ಸಂಖ್ಯೆ ನೆನಪಿಲ್ಲ.

ಆರೋಪಿಗೆ ರೂ.2,00,000/- ಹಣವನ್ನು ಕೊಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಆರೋಪಿಗೆ ನಾನು ಮನೆಯಲ್ಲಿ ಕೂಡಿಟ್ಟಿದ್ದ ಹಣವನ್ನು ತೆಗೆದುಕೊಂಡು ಹೋಗಿ ನನ್ನ ಮೊಬೈಲ್ ಅಂಗಡಿ ಬಳಿ ಇದ್ದ ಕ್ಯಾಂಟೀನ್ ನಲ್ಲಿ ನೀಡಿದ್ದೇನೆ, ಆಗ ಮಧ್ಯಾಹ್ನದ ಸಮಯವಾಗಿತ್ತು. ಆ ಸಮಯದಲ್ಲಿ ಕ್ಯಾಂಟೀನ್ ನಲ್ಲಿ ಸಾರ್ವಜನಿಕರು ಇದ್ದರು ಅಂದರೆ ಸಾಕ್ಷಿಯು ಯಾರು ಇದ್ದರೆಂದು ನಾನು ಗಮನಿಸಿಲ್ಲ ಎಂದು

ನುಡಿಯುತ್ತಾರೆ. ಆ ಕ್ಯಾಂಟೀನ್ ಪುಟ್ ಪಾತ್ ಕ್ಯಾಂಟೀನ್ ಆಗಿದ್ದು, ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಖರಾಯಪಟ್ಟದಲ್ಲಿ ಬಡ್ಡಿ ವ್ಯವಹಾರ ನಡೆಸುವ ನಾಗರಾಜು ಎಂಬುವವರು ನನಗೆ ಗೊತ್ತಿಲ್ಲ. ಸದರಿ ನಾಗರಾಜು ಅವರು ಆರೋಪಿ ಮತ್ತು ಇತರ ವ್ಯಕ್ತಿಗಳಿಗೆ ಹಣ ನೀಡಿ ಚಕ್ಕುಗಳನ್ನು ಪಡೆದುಕೊಂಡಿದ್ದು ನಂತರದಲ್ಲಿ ಆರೋಪಿ ಮತ್ತು ಇತರರು ಸದರಿ ನಾಗರಾಜು ಅವರಿಗೆ ಹಣವನ್ನು ಹಿಂದಿರುಗಿಸಿದರೂ ಸಹ ಸದರಿ ನಾಗರಾಜು ಆರೋಪಿ ಮತ್ತು ಇತರರಿಗೆ ಚಕ್ಕನ್ನು ಹಿಂದಿರುಗಿಸಿಲ್ಲ ಎಂದು ನಾಗರಾಜು ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ ಅಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.